ಶ್ರೀ ಹೆಚ್. ಜಿ. ಗೋವಿಂದೇಗೌಡ: ಮಾನ್ಯ ಅಧ್ಯಕ್ಷರೇ, ಕೊಡಲು ಸಾಧ್ಯವಿಲ್ಲ ಎನ್ನುವ ಪ್ರಶ್ನೆ ಇಲ್ಲ. ಫ್ಯಾಕ್ಟ್ಸ್, ಫಿಗರ್ಸ್, ಇದರ ಆಧಾರದ ಮೇಲೆ ಕೊಡಬೇಕೆಂದು ಮಾಡುತ್ತಾರೆ. ತಾವು ಕೇಳತಕ್ಕಂಥಾದ್ದರಲ್ಲಿಯೂ ಧರ್ಮ ಇದೆ. ಶಾಸಕರಾಗಿರತಕ್ಕಂಥವರು ಅಲ್ಲಿಯ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಮನಸ್ಸಿಟ್ಟುಕೊಂಡು ಕೇಳುವುದು ಸರಿ. ಆದರೆ ನಾವೂ ಕೂಡ ನಮ್ಮ ಇತಿಮಿತಿಯಲ್ಲಿ ಎಲ್ಲಿ ಏನು ಕೊಡಬೇಕೆಂದು ಯೋಚನೆ ಮಾಡುವುದಾದರೆ ತಾವುಗಳು ತಪ್ಪು ತಿಳಿದುಕೊಳ್ಳದೇ ಹೋಗುವುದಾದರೆ, ಒಂದು ವಿವರವನ್ನು ಕೊಡುತ್ತೇನೆ. ವಿಜಯ ಸಂಯುಕ್ತ ಪದವಿಪೂರ್ವ ಕಾಲೇಜಿನಲ್ಲಿ 234 ಮಕ್ಕಳಿದ್ದಾರೆ. ಬಾಲಕಿಯರ ಪದವಿಪೂರ್ವ ಕಾಲೇಜು, ಪಾಂಡವಪುರದಲ್ಲಿ 189 ವಿದ್ಯಾರ್ಥಿಗಳಿದ್ದಾರೆ. ಜನಪರ ಸೇವಾ ಟ್ರಸ್ಟ್ ಪದವಿ ಪೂರ್ವ ಕಾಲೇಜು ಮೇಲುಕೋಟೆ ಇಲ್ಲಿ 87 ವಿದ್ಯಾರ್ಥಿಗಳಿದ್ದಾರೆ. ವಿಶ್ವೇಶ್ವರಯ್ಯ ಸ್ವತಂತ್ರ ಪದವೀಪೂರ್ವ ಕಾಲೇಜು ಕ್ಯಾತಹಳ್ಳಿ ಇಲ್ಲಿ 78 ವಿದ್ಯಾರ್ಥಿಗಳಿದ್ದಾರೆ. ಸರಕಾರಿ ಪದವಿ ಪೂರ್ವ ಕಾಲೇಜು, ಚಿನಕುರುಳಿ - ಇಲ್ಲಿ 26 ವಿದ್ಯಾರ್ಥಿಗಳಿದ್ದಾರೆ. ಸರಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು ಬೆಳ್ಳಾರೆ - ಇಲ್ಲಿ 39 ವಿದ್ಯಾರ್ಥಿಗಳಿದ್ದಾರೆ. ಇವೊತ್ತು ನಮ್ಮ ಶಾಸಕರು ಶಾಲೆಗಳನ್ನು ಕೇಳುವುದರಲ್ಲಿ ಧರ್ಮ ಮತ್ತು ನ್ಯಾಯ ಇದೆ. ಆದರೆ ನಾವು ಆಡಳಿತ ಮಾಡತಕ್ಕಂಥ ಜನ ಅವಶ್ಯಕತೆಯನ್ನು ಅರಿತುಕೊಂಡು ಕೆಲಸ ಮಾಡದಿದ್ದರೆ ಯಾರಿಗೋ ತೃಪ್ತಿಪಡಿಸಲು ಮಾಡಿದ ಹಾಗೆ ಆಗುವುದು ಬೇಡ. ನಿಮ್ಮ ಅವಶ್ಯಕತೆಯೂ ನಿಜವಾಗಿದೆ, ನಾನು ಇಲ್ಲವೆಂದು ಹೇಳುವುದಿಲ್ಲ. ಇವೊತ್ತು ರಾಜ್ಯದಲ್ಲಿನ ಅನೇಕ ಕಡೆಗಳಲ್ಲಿನ ಪದವಿಪೂರ್ವ ಕಾಲೇಜುಗಳನ್ನು ನೋಡುತ್ತಾ ಇದ್ದೇವೆ. ಡಿಟೀರಿಯರೇಟ್ ಆಗುತ್ತಾ ಇದ್ದಾವೆ. ಅಲ್ಲಿಗೆ 10-12 ವಿದ್ಯಾರ್ಥಿಗಳು ಬರುತ್ತಾ ಇದ್ದಾರೆ. ಈ ರೀತಿ ಇರುವುದರಿಂದ ಇದನ್ನು ಪರಿಶೀಲನೆ ಮಾಡಬೇಕಾದಂಥ ಅವಶ್ಯಕತೆ ಇದೆ ಎಂಬುದನ್ನು ತಾವು ಒಪ್ಪುತ್ತೀರಿ ಎಂದು ನಾವು ಭಾವಿಸುತ್ತೇನೆ. ಏತಕ್ಕೆಂದರೆ ಜವಾಬ್ದಾರಿಯು ತಮಗೆ ಗೊತ್ತಿದೆ. ನಮ್ಮ ಕಷ್ಟ ಏನೆಂಬುದು ತಮಗೆ ಗೊತ್ತಿದೆ. ಆದ್ದರಿಂದ ಪದವಿಪೂರ್ವ ಕಾಲೇಜು ಕೊಡುವ ಅವಶ್ಯಕತೆ ಸದ್ಯದ ಪರಿಸ್ಥಿತಿಯಲ್ಲಿ ಕಷ್ಟವಾಗುತ್ತದೆ.

ಸಾಗರದ ಸಾರ್ವಜನಿಕ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವ ಬಗ್ಗೆ

103 (331) ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಸರ್ಕಾರದ ಸಾರ್ವಜನಿಕ ಆಸ್ಪತ್ರೆಯಲ್ಲಿ 150 ಹಾಸಿಗೆಗಳನ್ನು ಒದಗಿಸಲು ಸರ್ಕಾರಕ್ಕೆ ಪ್ರಸ್ತಾವನೆ ಬಂದಿರುವುದು ನಿಜವೇ?

2) ಹಾಗಿದ್ದರೆ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಡಾ॥ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

1) ಇಲ್ಲ

ಸಾಗರದ ಸಾರ್ವಜನಿಕ ಆಸ್ಪತ್ರೆಯನ್ನು 150 ಹಾಸಿಗೆಗಳಿಗೆ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಇರುವುದಿಲ್ಲ.

2) ಉದ್ಭವಿಸುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರದಲ್ಲಿ ಸಾಗರದ ಸಾರ್ವಜನಿಕ ಆಸ್ಪತ್ರೆಯನ್ನು 150 ಹಾಸಿಗೆಗಳಿಗೆ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಇರುವುದಿಲ್ಲ ಎಂದು ಹೇಳಿದ್ದಾರೆ. ಅವರಿಗೆ ನೆನಪಿಗೆ ತಂದು ಕೊಡುವುದೇನೆಂದರೆ, ನನಗೆ ಆರೋಗ್ಯ ನಿರ್ದೇಶಕರಿಂದ ಒಂದು ಪತ್ರ ಬಂದಿತ್ತು. ದಿನಾಂಕ 25-3-1997 ರಂದು ಅದರಲ್ಲಿನ ವಿಷಯ ಹೀಗೆ ಇದೆ. ''ಸಾಗರ ಸಾರ್ವಜನಿಕ ಆಸ್ಪತ್ರೆಯ ಹಾಸಿಗೆಯನ್ನು 150 ಹಾಸಿಗೆಗಳ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸುವುದು ಮತ್ತು ಸರಕಾರ ವಹಿಸಿಕೊಳ್ಳುವ ಬಗ್ಗೆ. ಎಂದು ಹೇಳಿ ಅವರು ಉತ್ತರ ಕೊಟ್ಟಿದ್ದಾರೆ. ಸಾರ್ವಜನಿಕ ಆಸ್ಪತ್ರೆಯನ್ನು ಜಿಲ್ಲಾ ಪಂಚಾಯತ್‌ನಿಂದ ರಾಜ್ಯ ವಲಯಕ್ಕೆ ತೆಗೆದುಕೊಳ್ಳಲು ಈಗಾಗಲೇ ನಿರ್ದೇಶನ ನೀಡಿದ ಪತ್ರ ಸಂಖ್ಯೆ - 28: 92-93, ದಿನಾಂಕ : 17-6-1995 ರಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಈಗ ಮತ್ತೆ ನೆನಪು ಪತ್ರವನ್ನು ಬರೆಯಲಾಗಿದೆ. ಜಿಲ್ಲಾ ಪಂಚಾಯತ್ ಅಧೀನದಿಂದ ಸರಕಾರದ ಅಧೀನಕ್ಕೆ ತೆಗೆದುಕೊಂಡ ತತ್‌ಕ್ಷಣ 150 ಹಾಸಿಗೆಗಳ ಮೇಲ್ದರ್ಜೆಗೆ ಏರಿಸುವ ವಿಚಾರವನ್ನು ಕೈಗೆತ್ತಿಕೊಳ್ಳಲಾಗುವುದು. ಈ ಪ್ರಸ್ತಾವನೆ ಸರಕಾರದ ಮುಂದೆ ಇದೆ. ತಮಗೆ ಬೇಕಾದರೆ ಕಡತದ ಸಂಖ್ಯೆಯನ್ನೂ ಕೂಡ ಹೇಳುತ್ತೇನೆ. ಆ.ಕು.ಕ: 256, ಆ.ಯೋ.ಸಂ-92. ಈ ಕಡತದಲ್ಲಿ 150 ಹಾಸಿಗೆಗಳನ್ನು ಮಂಜೂರು ಮಾಡುವುದಕ್ಕೆ ಬೇಕಾದಂಥ ಪ್ರಸ್ತಾವನೆಯನ್ನು ಎಲ್ಲಾ ಮಾಹಿತಿಗಳೊಂದಿಗೆ ಸರಕಾರಕ್ಕೆ ಬಂದಿದೆ ಮತ್ತು ಸರಕಾರದ ಕಡತದಲ್ಲಿದೆ. ತಾವುಗಳ ದಯಮಾಡಿ ಈ ಕಡತವನ್ನು ತರಿಸಿಕೊಂಡು ಅವರು ಯಾವ ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆ, ಅದಕ್ಕೆ ಮಂಜೂರಾತಿಯನ್ನು ಕೊಡತಕ್ಕಂಥ ತೀರ್ಮಾನವನ್ನು ಮಾಡಬೇಕೆಂದು ಅಪೇಕ್ಷಿಸುತ್ತೇನೆ.

ಡಾ॥ ಹೆಚ್. ಸಿ. ಮಹದೇವಪ್ಪ: ಮಾನ್ಯ ಅಧ್ಯಕ್ಷರೇ, ಈ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸುವುದಕ್ಕೆ ಹಿಂದೆ ರಾಜ್ಯ ಸರಕಾರ ವಲಯದಿಂದ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಾ ಇದ್ದೆವು. ವಿಶ್ವಬ್ಯಾಂಕ್ ಮತ್ತು ಜರ್ಮನಿಯ ಬೃಹತ್ ಯೋಜನೆಗಳು ಮಂಜೂರಾತಿಯಾದ ಮೇಲೆ ರಾಜ್ಯದ ಸುಮಾರು ಕೆ ಹೆಚ್ ಎಸ್ ಡಿಪಿ ಯಲ್ಲಿ 201, ಎಫ್ ಡಬ್ಲು ಸುಮಾರು 51, ಒಟ್ಟು 252 ಆಸ್ಪತ್ರೆಗಳನ್ನು ತಾಲ್ಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸುವುದರಿಂದ ತಾಲ್ಲೂಕು ಸಬ್ ಡಿವಿಜನ್ ಮತ್ತು ಜಿಲ್ಲಾ ಆಸ್ಪತ್ರೆಗಳಿಗೆ ಇರತಕ್ಕಂಥ ಒತ್ತಡವು ಕಡಿಮೆಯಾಗುತ್ತದೆ. ಇವೊತ್ತು ಸಾಗರ ಆಸ್ಪತ್ರೆಯು 100 ಹಾಸಿಗೆಗಳದ್ದಾಗಿದೆ. ಅದನ್ನು ಕಟ್ಟಿದಂಥ ಸಂದರ್ಭದಲ್ಲಿ 100 ಹಾಸಿಗೆಗಳ ವ್ಯವಸ್ಥೆಗೆ ಬೇಕಾಗುವ ಎಲ್ಲಾ ವ್ಯವಸ್ಥೆಗಳನ್ನು ಮಾಡದೇ ಇರುವುದರಿಂದ ಸುಮಾರು ಒಂದು ಕೋಟಿ ರೂ.ಗಳ ಅಂದಾಜಿನಲ್ಲಿ ಕೆ ಹೆಚ್. ಎಸ್. ಡಿ ಈ ಒಂದು ಯೋಜನೆಯನ್ನು ತೆಗೆದುಕೊಂಡು ಎಕ್ಸ್‌ಪ್ಯಾನ್‌ಶನ್ ಮತ್ತು ರಿನೋವೇಷನ್ ಮತ್ತು ಇತರ ಒಟಿ ಮುಂತಾದವುಗಳನ್ನು ದುರಸ್ತಿ ಮಾಡಿ, ಅಕ್ಕಪಕ್ಕದ ಎಲ್ಲಾ ಆಸ್ಪತ್ರೆಗಳು ಮೇಲ್ದರ್ಜೆಗೆ ಏರುವುದರಿಂದ ಸದ್ಯಕ್ಕೆ ಇದನ್ನು ಮೇಲ್ದರ್ಜೆಗೆ ಏರಿಸುವ ಅಗತ್ಯವಿಲ್ಲ. ವರ್ಕ್ ಲೋಡ್ ಅಲ್ಲಿ ತುಂಬಾ

ಇದೆ ಎಂದು ಮಾನ್ಯ ಸದಸ್ಯರ ಭಾವನೆಯಾದರೆ ಅಲ್ಲಿಗೆ ಒಂದು ಎಕ್ಸ್‌ಪರ್ಟ್ ಕಮಿಟಿಯನ್ನು ಕಳುಹಿಸಿ, ವರದಿಯನ್ನು ತರಿಸಿಕೊಂಡು, ರೋಗಿಗಳ ದಾಖಾಲಾತಿಗಳ ಮಾಹಿತಿಗಳನ್ನು ಪಡೆದು ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಲು ಯತ್ನ ಮಾಡುತ್ತೇನೆ.

ಅಧ್ಯಕ್ಷರು : ಚು.ಗು. ಪ್ರಶ್ನೆ ಕ್ರಮಾಂಕ : 104 (377) - ಶ್ರೀ ರೇವುನಾಯಕ್ ಬೆಳಮಗಿ- ಇವರ ಪ್ರಶ್ನೆಗೆ ಸರಕಾರದವರು ಸಮಯವನ್ನು ಕೇಳಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ರಕ್ತ ನಿಧಿ ಬ್ಯಾಂಕ್ ಸ್ಥಾಪನೆ

105 (680) ಡಾ॥ ಎಂ.ಪಿ. ಕರ್ಕಿ (ಕುಮಟಾ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

1) ಉತ್ತರ ಕನ್ನಡ ಜಿಲ್ಲೆಯಲ್ಲಿ ರಕ್ತ ನಿಧಿ ಬ್ಯಾಂಕ್ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಹಾಗಿದ್ದಲ್ಲಿ ರಕ್ತನಿಧಿ ಬ್ಯಾಂಕ್ ಸ್ಥಾಪಿಸಲು ಕೈಗೊಂಡ ಕ್ರಮಗಳೇನು?

3) ಎಂದು ಎಲ್ಲೆಲ್ಲಿ ಅಸ್ತಿತ್ವಕ್ಕೆ ತರಲಾಗುವುದು?

ಡಾ॥ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ)

1) ಬಂದಿದೆ

2) ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ಆರೋಗ್ಯ ವ್ಯವಸ್ಥೆಗಳ ಅಭಿವೃದ್ಧಿ ಯೋಜನೆಯಲ್ಲಿ ಕಾರವಾರ ಜಿಲ್ಲಾ ಆಸ್ಪತ್ರೆ ಮತ್ತು ಸಿರಸಿ ಆಸ್ಪತ್ರೆಗಳಲ್ಲಿ ರಕ್ತ ನಿಧಿ (ಬ್ಲಡ್ ಬ್ಯಾಂಕ್) ಸ್ಥಾಪಿಸುವ ಪ್ರಸ್ತಾವನೆ ಸೇರಿದೆ.

3) ಕಾರವಾರ ಜಿಲ್ಲಾ ಆಸ್ಪತ್ರೆಯಲ್ಲಿ ರಕ್ತ ನಿಧಿ (ಬ್ಲಡ್ ಬ್ಯಾಂಕ್) ಸ್ಥಾಪನೆಗಾಗಿ ಲೋಕೋಪಯೋಗಿ ಇಲಾಖೆಯ ವತಿಯಿಂದ ಕಟ್ಟಡ ನಿರ್ಮಿಸಲಾಗಿದ್ದು, ಇದಕ್ಕೆ ಬೇಕಾದ ಸಲಕರಣೆಗಳನ್ನು ಕರ್ನಾಟಕ ಆರೋಗ್ಯ ವ್ಯವಸ್ಥೆಗಳ ಅಭಿವೃದ್ಧಿ ಯೋಜನೆಯಿಂದ ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಸಿರಸಿ ಆಸ್ಪತ್ರೆಯಲ್ಲಿ ರಕ್ತ ನಿಧಿ ಕಟ್ಟಡ ನಿರ್ಮಾಣಕ್ಕಾಗಿ ವಾಸ್ತು ಶಿಲ್ಪಿಗಳನ್ನು ನೇಮಕ ಮಾಡಿದ್ದು, ತಯಾರಾದ ನಕ್ಷೆಗಳು ವಿಶ್ವಬ್ಯಾಂಕ್ ವಾಸ್ತು ಶಿಲ್ಪಿಗಳಿಂದ ಅನುಮೋದನೆಗೊಂಡಿದೆ. ಮುಂದಿನ ಅಗತ್ಯ ಕ್ರಮಕ್ಕಾಗಿ ಏರ್ಪಾಡು ಮಾಡಲಾಗುವುದು.

ಡಾ॥ ಎಂ.ಪಿ. ಕರ್ಕಿ : ಮಾನ್ಯ ಅಧ್ಯಕ್ಷರೇ, ರಾಷ್ಟ್ರೀಯ ದಾರಿ (1) ನಮ್ಮ ಕರಾವಳಿ ಭಾಗದಲ್ಲಿ ಹಾಯ್ದು ಹೋಗುತ್ತದೆ. ಅದರಲ್ಲಿ ರಸ್ತೆ ಅಪಘಾತಗಳಿಂದಾಗಿ ರಕ್ತ ದೊರೆಯದೆ ಅನೇಕ ಸಾವು-ನೋವುಗಳು ಉಂಟಾಗುತ್ತಿವೆ. ಹಾಗೆಯೇ ಹೆರಿಗೆ ಸಂಬಂಧಪಟ್ಟ ಚಿಕಿತ್ಸೆ ಸೂಕ್ತ ರೀತಿಯಲ್ಲಿ ಬೇಕಾಗುವ ರಕ್ತ ದೊರೆಯುತ್ತಿಲ್ಲದ ಕಾರಣ ಅನೇಕ ಸಾವುನೋವುಗಳು ಉಂಟಾಗುತ್ತಿವೆ. ಕುಮಟಾ, ಹೊನ್ನಾವರ, ಭಟ್ಕಳ- ಈ ಮೂರು ಕಡೆಗಳಲ್ಲಿ ಸಾಧಾರಣವಾಗಿ 250 ರಿಂದ 300 ಹಾಸಿಗೆಗಳು ಇರತಕ್ಕಂಥ ನರ್ಸಿಂಗ್ ಹೋಂಗಳು ಇದ್ದಾವೆ. ಅಲ್ಲಿ ಎಕ್ಸ್‌ಪರ್ಟ್ಸ್ ಇದ್ದಾರೆ, ಸರ್ಜನ್ಸ್ ಇದ್ದಾರೆ, ಅವರಿಗೆ ಸರ್ಜರಿ ಮಾಡಬೇಕಾಗಿದ್ದರೂ ಕೂಡ ರಕ್ತ ಬೇಕಾಗುತ್ತದೆ. ಆದ್ದರಿಂದ ಹೊನ್ನಾವರದಲ್ಲಿ ಬ್ಲಡ್ ಬ್ಯಾಂಕ್‌ನ್ನು ಸ್ಥಾಪನೆ ಮಾಡಲು ತಾವು ಕ್ರಮ ಕೈಗೊಳ್ಳುತ್ತೀರಾ ಎಂದು ಕೇಳಬಯಸುತ್ತೇನೆ. ಅದು ಹೊನ್ನಾವರದಲ್ಲಿ ಸೆಕೆಂಡ್ ಫೇಸ್‌ಗೆ ಇದೆ. ಅದನ್ನು ಫಸ್ಟ್ ಫೇಸ್‌ಗೆ ತರಲು ಕಾರ್ಯ ಪ್ರವೃತ್ತರಾಗುತ್ತೀರೋ?